## 7. ಶಾಸನ ರಚನೆ

### 1. ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕ, 2007

ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಎನ್. ಚೆಲುವರಾಯಸ್ವಾಮಿ (ಸಾರಿಗೆ ಸಚಿವರು)** :– ಮಾನ್ಯ ಅಧ್ಯಕ್ಷರೆ, 2007 ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

**ಶ್ರೀ ಎನ್. ಚೆಲುವರಾಯಸ್ವಾಮಿ (ಸಾರಿಗೆ ಸಚಿವರು)** :– ಮಾನ್ಯ ಅಧ್ಯಕ್ಷರೆ, Private services vehicles ನನ್ನ ಇಲಾಖೆಯಿಂದ 1–03–1991 ರಿಂದ ಜಾರಿಗೆ ಬರುವಂತೆ ತೆರಿಗೆಯನ್ನು ವಿಧಿಸಿ ವಸೂಲಿ ಮಾಡಲಾಗುತ್ತಿತ್ತು. ಇದರ ಪ್ರಕಾರ ವಾಹನ ಮತ್ತು ರಹದಾರಿಯ ಪರ್ಮಿಟ್‌ಗಳು ಕಂಪನಿಯ ಹೆಸರಿನಲ್ಲಿ ಇರಬೇಕಾಗಿತ್ತು. ಕೆಲವು ವಾಹನ ಮಾಲೀಕರು ತಮ್ಮ ವಾಹನಗಳನ್ನು ಕಂಪನಿ ಹೆಸರಿಗೆ ಮಾಲೀಕತ್ವವನ್ನು ವರ್ಗಾವಣೆ ಮಾಡಿ ಖಾಸಗಿ ಸೇವಾ ವಾಹನ ರಹದಾರಿಯನ್ನು ಕಂಪನಿಯ ಹೆಸರಿನಲ್ಲೇ ಪಡೆದುಕೊಂಡು ಕಂಪನಿಯ ಸಿಬ್ಬಂದಿಯನ್ನು ಕೊಂಡೊಯ್ಯುತ್ತಿದ್ದರು. ಈ ರೀತಿ ಕಂಪನಿಯ ಸಿಬ್ಬಂದಿಯನ್ನು ಕೊಂಡೊಯ್ಯಲು ಖಾಸಗಿ ಮಾಲೀಕರು ಕಂಪನಿಯೊಂದಿಗೆ ಒಪ್ಪಂದವನ್ನು ಮಾಡಿಕೊಂಡು ಹಣವನ್ನು ಸ್ವೀಕರಿಸುತ್ತಿದ್ದರು. ಇದರಿಂದ ವಾಹನಗಳು ದಾಖಲೆಗಳಲ್ಲಿ ಕಂಪನಿಗಳ ಹೆಸರಿನಲ್ಲಿದ್ದರೂ ಸಹ ವಾಸ್ತವವಾಗಿ ಖಾಸಗಿ ಮಾಲೀಕರೇ ವಾಹನಗಳ ಎಲ್ಲ ನಿರ್ವಹಣೆಯನ್ನು ಮಾಡುತ್ತಿದ್ದರು.

1991 ರಲ್ಲಿ Private Service Act ಬಂದ ಮೇಲೆ ಅದರ ಇತಿಮಿತಿಯನ್ನು ನಿಟ್ಟು mislead ಮಾಡಿಕೊಂಡು ಮಾಲೀಕರು ಅವರ ಹೆಸರಿನಲ್ಲಿ ವಾಹನಗಳನ್ನು ಕೋರಿಸಿಕೊಂಡು ಖಾಸಗಿಯಾಗಿ ಒಂದು agreement ಮಾಡಿಕೊಂಡು ಹಣವನ್ನು ಅವರು ವಸೂಲಿ ಮಾಡತಕ್ಕಂಥಾದ್ದನ್ನು ಮಾಡಿಕೊಂಡು ಬಂದಿದ್ದಾರೆ. 1998 ರ Audit objection ನಲ್ಲಿ ಮತ್ತು ನಮ್ಮ ಇಲಾಖೆಯವರೇ ಅದನ್ನು ಕಂಡುಹಿಡಿದು, Contract Garage System ಏನಿತ್ತು ಆ system ನಲ್ಲಿ ನೀವು private

services vehicles ಓಡಿಸುತ್ತಿರುವುದರಿಂದ ನೀವು ಹೆಚ್ಚು ತೆರಿಗೆಯನ್ನು ಕಟ್ಟಬೇಕಾಗುತ್ತದೆ ಎಂದು ಒಂದು demand notice ನ್ನು ಅವರಿಗೆ ಕೊಟ್ಟು ದುಡ್ಡನ್ನು ಕಟ್ಟಲಿಕ್ಕೆ ಒಂದು notice ನ್ನು ಇಶ್ಯೂ ಮಾಡಿದ್ದೇವೆ. ಆ notice ಮೇಲೆ ಇಲಾಖೆಗೆ ಒಂದು ಅಪೀಲ್ ಮಾಡಿದ್ದಾರೆ, ಆಪೀಲ್‌ನಲ್ಲಿ ಸಹ ಇಲಾಖೆಯಲ್ಲಿ ನೀವು ಹಣ ಕಟ್ಟಬೇಕಾಗುತ್ತದೆ ಎಂದು ತೀರ್ಮಾನ ಕೊಟ್ಟಿದೆ.

ಅದಾದ ನಂತರ ಅವರು High Court ಗೆ ಹೋಗಿದ್ದಾರೆ. High Court ನಲ್ಲಿ ಸಹ interim order ನ್ನು, ಮುಂದೆ Court ನಲ್ಲಿ judgment ಆಗುವವರೆಗೆ judgment ನಲ್ಲಿ ಏನು ಬರುತ್ತದೆ ಅದನ್ನು condition ಹಾಕಿ ನೀವು tax collect ಮಾಡಬಹುದು. Collect ಮಾಡಿ judgment ಬಂದಾಗ ಏನಾದರೂ ಇಲಾಖೆಗೆ ವಿರುದ್ಧವಾದಾಗ judgment ಬಂದರೆ 12% ಬಡ್ಡಿ ಸೇರಿಸಿ ನೀವು ವಾಪಸ್ ಮಾಲೀಕರಿಗೆ ಕೊಡಬೇಕಾಗುತ್ತದೆ. ಅಲ್ಲಿಯವರೆಗೆ ನೀವು ಇದನ್ನು ಕಲೆಕ್ಟ್ ಮಾಡಬಹುದು ಎಂದು interim order ಕೊಟ್ಟರು. interim order ಆದ ನಂತರ ಮತ್ತೆ final order ನಲ್ಲಿ ಸಹ High Court ನಲ್ಲಿ ಇಲಾಖೆಯ ಪರವಾಗಿದ್ದ ಆದೇಶವನ್ನೇ ಎತ್ತಿ ಹಿಡಿದರು. ನಂತರ ನಾವು ಏನು demand ಕೊಟ್ಟಿದ್ದೆವು, ಅದರ ಪ್ರಕಾರ 10 ಕೋಟಿ ರೂಪಾಯಿಗಳಷ್ಟು taxes ನ್ನು ಮಾಲೀಕರಿಂದ ಕಲೆಕ್ಟ್ ಮಾಡಿದ್ದೆವು.

2005 ರಲ್ಲಿ ಮಾಲೀಕರು ಮತ್ತೆ Double Bench ಗೆ ಹೋದಾಗ, Double Bench ನಲ್ಲಿ Private Services vehicle ಕಾನೂನಿಗೆ ನೀವು ತಿದ್ದುಪಡಿಯನ್ನು ತರಬೇಕಾಗುತ್ತದೆ. ನೀವು ವಸೂಲಿ ಮಾಡಿರತಕ್ಕಂಥಾದ್ದು ತಪ್ಪು ನೀವು ಅವರಿಗೆ ವಾಪಸ್ ಕೊಡಬೇಕು ಎನ್ನುವ ಆದೇಶವನ್ನು ಕೊಟ್ಟರು. ಆದರೆ 1998 ರಲ್ಲಿ Audit objection ಬಂದಾಗಲೇ, ಆ Private Services vehicles Act ಗೆ ತಿದ್ದುಪಡಿ ತಂದು, 2000 ನೇ ಇಸವಿಯಿಂದ ನಾವು taxces ವಸೂಲಿ ಮಾಡುತ್ತಿದ್ದೇವೆ. 1991 ರಿಂದ 2000 ರವರೆಗೆ ಏನು 10 ವರ್ಷ ನಾವು ಇದನ್ನು ದುರುಪಯೋಗ ಮಾಡಿಕೊಂಡಿದ್ದೇವೆ. ವಸೂಲಿ ಮಾಡಿದ ಹಣವನ್ನು ತಪ್ಪಿಸಲಿಕ್ಕೋಸ್ಕರ retrospective ಆಗಿ ಒಂದು amendment ನ್ನು ತಮ್ಮ ಮುಂದೆ ತಂದಿದ್ದೇನೆ. ಮಾನ್ಯ ಸದಸ್ಯರೆಲ್ಲರೂ ಇದನ್ನು ಮಂಜೂರು ಮಾಡಬೇಕಾಗಿ ವಿನಂತಿ.

**ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ)** :- ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಚೆಲುವರಾಯಸ್ವಾಮಿಯವರ ಹತ್ತಿರ ಪರ್ಸನಲ್ ಆಗಿ ಮಾತನಾಡಿದೆ. High Court ನಲ್ಲಿ judgment ಆಗಿ ಅವರಿಗೆ 1991 ರಿಂದ 2001 ರವರೆಗೆ ಹಣ ವಾಪಸ್ ಕೊಡಬೇಕೆಂದು ತೀರ್ಮಾನವಾದ ನಂತರ retrospective ಆಗಿ ತಾವು ಒಂದು ಶಾಸನವನ್ನು ಇಲ್ಲಿ ಪಾಸ್ ಮಾಡುತ್ತಿದ್ದೀರಿ. It has to be passed in the scrutiny of the High Court. ಸ್ವಲ್ಪ ಇನ್ನೊಂದು ಸಾರಿ ಯೋಚನೆ ಮಾಡಿ. ನಾವು ತಕರಾರು ಮಾಡುವುದಿಲ್ಲ. ರಾಜ್ಯಕ್ಕೆ 10 ರಿಂದ 12 ಕೋಟಿ ರೂಪಾಯಿಗಳು ಉಳಿಯುತ್ತದೆ ಎಂದು ಹೇಳಿದಾಗ ಬೇಡವೆಂದು ಹೇಳಿ ನಾವು ಇಲ್ಲಿ ನಿಂತುಕೊಂಡು ಮಾತನಾಡುವುದಕ್ಕಾಗುವುದಿಲ್ಲ. But, after the decision of the High Court, ಹಿಂದಿನಿಂದ 1991 ನೇ ಇಸವಿಯಿಂದ ಜಾರಿಗೆ ಬರುವ ಹಾಗೆ ನಾವು ಒಂದು ಬಿಲ್ಲನ್ನು ಇವತ್ತು ಇಲ್ಲಿ ಪಾಸ್ ಮಾಡಬಹುದಾ? ಆದೇಶವಾದ ಮೇಲೆ ನೀವು ಅವರಿಗೆ ದುಡ್ಡು ಕೊಡಬೇಕು. ಬೇರೆ ಏನೂ ಆದೇಶ ಅಲ್ಲ ಇದು.

High Court decision ಕೊಟ್ಟಿದೆ, ನೀವು ಅವರಿಗೆ with interest 10 ರಿಂದ 12 ಕೋಟಿ ರೂಪಾಯಿಗಳನ್ನು Government ವಾಪಸ್ ಕೊಡಬೇಕೆಂದು ಹೇಳಿದೆ. ಅದನ್ನು ತಪ್ಪಿಸಲಿಕ್ಕೆ ನೀವು ಈಗ ಶಾಸನ ತಂದಿದ್ದೀರಿ. ತಪ್ಪಿಸಿ ಬಿಟ್ಟರೆ ಸಂತೋಷ. ನಾವೇನು ಸರ್ಕಾರದ ಖಜಾನೆ ದುಡ್ಡು ತೆಗೆದುಕೊಂಡು ಅವರಿಗೆ ಕೊಡಿ ಎಂದು ಹೇಳುವುದಿಲ್ಲ. ಬಹುಶಃ ಇದು ಎಲ್ಲೋ ಒಂದು ಕಡೆ ಸರಿ ಅಲ್ಲವೆಂದು ನನ್ನ ಭಾವನೆ. Decision of the Court has to be respected. ನೀವು ಆವತ್ತು ಶಾಸನ ಮಾಡಬೇಕಾಗಿತ್ತು, ಮಾಡಿಲ್ಲ. ಇನ್ನೊಂದು ಸಲ ವಿಮರ್ಶೆ ಮಾಡಿ, ಇಲ್ಲ ನಮಗೇನೂ ತೊಂದರೆ ಇಲ್ಲ, ಬಾಧಕ ಇಲ್ಲವೆಂದರೆ, ನಾನು ನಿಮ್ಮ ಚಿತ್ತಕ್ಕೆ ಇದನ್ನು ಬಿಡುತ್ತೇನೆ.

**ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ (ಗುರುಮಿಟ್‌ಕಲ್)** :- ಮಾನ್ಯ ಅಧ್ಯಕ್ಷರೆ, ಅನೇಕ ಸಾರಿ ನಾವು ಕೆಲವು Executive Order ಗಳನ್ನು pass ಮಾಡುತ್ತೇವೆ. Act ನಲ್ಲಿ provision ಇಲ್ಲದೇ ಇದ್ದಾಗ ರೂಲ್ಸ್ ನಲ್ಲಿ ಕೂಡ ನಾವು ಮಾಡಿಕೊಳ್ಳದೇ ಇದ್ದಾಗ, ಇಂತಹ ತಾಪತ್ರಯಗಳು ಬರುತ್ತವೆ. Naturally, ಯಾವಾಗ ಅದನ್ನು 2000 ದಿಂದ ಇತ್ತೀಚೆಗೆ valid ಇದೆ ಎಂದರೆ, ಈ ಹಿಂದೆ retrospective effect ಅಂದರೆ, 1991 ರಿಂದ ಆ ಕಾನೂನು ಅಸ್ಥಿತ್ವದಲ್ಲಿ ಇತ್ತು. Naturally,

ಆಗ ತಪ್ಪಿಸಿಕೊಳ್ಳುತ್ತಿದ್ದರು ಎಂದಾಗ ಅದನ್ನು ಕೊಡಲೇಬೇಕು. ಕೊಡುವಾಗ ನಾವು ರೆಕವರಿ ಮಾಡಿದ್ದು ಈಗಿನ ದೃಷ್ಟಿಯಿಂದ ಸರಿ ಎಂದ ಮೇಲೆ retrospective effect ಮಾಡುವುದಕ್ಕೆ ಏನೂ ತಾಪತ್ರಯ ಆಗುವುದಿಲ್ಲ. ಏಕೆಂದರೆ ಖಜಾನೆಗೆ ದುಡ್ಡು ಬರುವಾಗ ಪುನಃ ಇದನ್ನು ವಿಮರ್ಶೆ ಮಾಡತಕ್ಕಂತಹ ಅವಶ್ಯಕತೆ ಇಲ್ಲ. ಏಕೆಂದರೆ ಈಗಾಗಲೇ ಒಂದು ಸಾರಿ ಅವರು upheld ಮಾಡಿದ್ದಾರೆ. ಆದರೆ retrospective effect ಕೊಟ್ಟು ದುಡ್ಡು ವಸೂಲು ಮಾಡುವುದರ ಬಗ್ಗೆ ಮಾತ್ರ ಈಗ ಬಂದಿರುವ ತಾಪತ್ರಯ. ಅದಕ್ಕಾಗಿ ಅದಕ್ಕೆ legal strength ಇರಲಿ ಎಂದು ಇವತ್ತು ಈ ಅಮೆಂಡ್‌ಮೆಂಟ್ ಮುಖಾಂತರ ತರುತ್ತಿದ್ದಾರೆ. ಬಹುಶಃ ನನಗನ್ನಿಸಿದ ಮಟ್ಟಿಗೆ ರಾಜ್ಯದ ಹಿತದೃಷ್ಟಿಯಿಂದ KSRTC ಹಿತದೃಷ್ಟಿಯಿಂದ ಇದು ಒಳ್ಳೆಯದು, ಇದನ್ನು ಕೈಬಿಡಬಾರದು ಎನ್ನುವುದು ನನ್ನ ಅಭಿಪ್ರಾಯ.

**ಶ್ರೀ ಜೆ.ಸಿ. ಮಾಧುಸ್ವಾಮಿ** :- ಮಾನ್ಯ ಅಧ್ಯಕ್ಷರೆ, ನೀವು provision ಮಾಡದೇ tax collect ಮಾಡಿ High Court ನ Division Bench ನಲ್ಲಿ decision ಆಗಿ, ಅದಕ್ಕೆ ಮೊದಲು High Court Condition ಹಾಕಿ, if it goes in adverse, ನೀವು with interest ವಾಪಸ್ ಕೊಡಬೇಕೆಂದು ಹೇಳಿ, ಇವತ್ತು interest ಸಹಿತ ವಾಪಸ್ ಕೊಡಿ ಎಂದು High Court ಆದೇಶ ಮಾಡಿದ ಮೇಲೆ, 1991 ನೇ ಇಸವಿಯಿಂದ ಜಾರಿಗೆ ಬರುವ ಹಾಗೆ ನಾವು ಒಂದು ಶಾಸನವನ್ನು ಪಾಸ್ ಮಾಡಬಹುದಾ ಎಂದು ಪ್ರಶ್ನೆ.

**ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ** :- ಮಾನ್ಯ ಅಧ್ಯಕ್ಷರೆ, documentation ತೆಗೆದುಕೊಂಡು ಮೋಸ ಮಾಡಿದವರಿಗೆ ಬಿಡುವುದಕ್ಕಾಗುತ್ತಾ? ಕಂಪನಿಗಳಿಗೆ ಕೊಡುವುದು, ಪರ್‌ಸೀಟ್ ಇಷ್ಟು ದುಡ್ಡು ಕೊಡಬೇಕು ಎನ್ನತಕ್ಕಂಥಾದ್ದು ಇರುತ್ತದೆ. In-between agreement ಮಾಡಿಕೊಲ್ಳುವುದು. Heavy tax ಕೊಡುವುದನ್ನು ತಪ್ಪಿಸಿಕೊಳ್ಳುವುದಕ್ಕೋಸ್ಕರ ಈ ಅಗ್ರಿಮೆಂಟ್ ಮಾಡಿಕೊಳ್ಳುತ್ತಾರೆ. ಸಹಾಯ ಮಾಡುವುದಕ್ಕೋಸ್ಕರ ಅಲ್ಲ, ತಮಗೆ ದುಡ್ಡು ಉಳಿತಾಯ ಮಾಡಿಕೊಳ್ಳುವುದಕ್ಕಾಗಿ ಮಾಡಿಕೊಳ್ಳುತ್ತಾರೆ. ಯಾವಾಗ department ನವರು detect ಮಾಡಿದರೋ naturally recovery ಮಾಡುವುದಕ್ಕೆ ಹೋಗಬೇಕು. recovery ಮಾಡುವುದು ತೊಂದರೆ ಇದೆ ಎಂದು ಹೇಳಿ ಅವರು ಈ amend-ment ತಂದಿದ್ದಾರೆ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ)** :– ಮಾನ್ಯ ಅಧ್ಯಕ್ಷರೆ, ಈ ಬಿಲ್ ಪಾಸ್ ಮಾಡಲಿಕ್ಕೆ ನಮ್ಮದೇನೂ ತಕರಾರು ಇಲ್ಲ. ನಾಳೆ ದಿವಸ ಇದು ಕೋರ್ಟಿಗೆ ಹೋದರೆ, ಇದು ನಿಲ್ಲುವುದಿಲ್ಲವೆಂದು ನನಗೆ ಗ್ಯಾರಂಟಿ ಇದೆ. ಏಕೆಂದರೆ, ಕೋರ್ಟಿಗೆ ಹೋದರೆ ಇದು ನಿಲ್ಲುವುದಿಲ್ಲ. ಕೋರ್ಟ್ ಗ್ಯಾರಂಟಿಯಾಗಿ stricture ಪಾಸ್ ಮಾಡುತ್ತದೆ. ನೀವು ಕೋರ್ಟಿನ ತೀರ್ಮಾನದ ವಿರುದ್ಧವಾಗಿ ಒಂದು ಬಿಲ್ ಪಾಸ್ ಮಾಡುತ್ತಿದ್ದೀರಿ ಎನ್ನತಕ್ಕಂತಹ ಅಭಿಪ್ರಾಯ ಕೋರ್ಟಿಗೆ ಬರುತ್ತದೆ. ಏಕೆಂದರೆ, ಇದು 1991 ರಲ್ಲಿ ಆಗಿರತಕ್ಕಮಥಾದ್ದು. 1991 ರಿಂದ ನೀವು with interest ಕಟ್ಟಬೇಕೆಂದು ಕೋರ್ಟ್ ಆರ್ಡರ್ ಮಾಡುತ್ತದೆ.

ಅವತ್ತು ನಿಮ್ಮ ಹತ್ತಿರ ಹಣ collect ಮಾಡಲಿಕ್ಕೆ provision ಇದ್ದಿದ್ದರೆ ಕೋರ್ಟ್ ಅದನ್ನು ಆ ರೀತಿ ಆರ್ಡರ್ ಮಾಡುವುದಕ್ಕಾಗುತ್ತಿರಲಿಲ್ಲ. 1991 ರಲ್ಲಿ ಕೋರ್ಟ್ ಆರ್ಡರ್ ಮಾಡಿದೆ. ನಾವು ಬಿಲ್ ತರುತ್ತಿರತಕ್ಕಂಥಾದ್ದು ಈಗ. ಕೋರ್ಟ್‌ಗೆ ಯಾವ ರೀತಿ ಮೆಸೇಜ್ ಹೋಗುತ್ತದೆ ಎಂದರೆ, ಕೋರ್ಟ್ ಆಜ್ಞೆಯನ್ನು ಉಲ್ಲಂಘನೆ ಮಾಡುವುದಕ್ಕೋಸ್ಕರ ಇವರು ಸದನದಲ್ಲಿ ಈ ಕಾನೂನನ್ನು ಪಾಸ್ ಮಾಡಿದ್ದಾರೆ ಎನ್ನತಕ್ಕಂತಹ ಅಭಿಪ್ರಾಯ ಕೋರ್ಟಿಗೆ ಸ್ಪಷ್ಟವಾಗಿ ಬರುತ್ತದೆ. ಅದನ್ನು ಅವರು ಛಾಲೆಂಜ್ ಮಾಡೇ ಮಾಡುತ್ತಾರೆ. ಖಾಗಿ ಮಾಲೀಕರು ಇದನ್ನು ಸವಾಲು ಮಾಡುತ್ತಾರೆ. ಆದ್ದರಿಂದ ಇದರ ಬಗ್ಗೆ ಸ್ವಲ್ಪ ಚರ್ಚೆ ಮಾಡಿ ಹೇಗೆ ಇದರಿಂದ ನಾವು ಪಾರಾಗಬಹುದು ಎನ್ನತಕ್ಕಂಥದ್ದರ ಬಗ್ಗೆ ಆಲೋಚನೆಯನ್ನು ಮಾಡಿ ತಂದರೆ ಒಳ್ಳೆಯದು. ನಾವಂತೂ ಬಿಲ್‌ಗೆ ವಿರೋಧವಿಲ್ಲ. ಏಕೆಂದರೆ ಸರ್ಕಾರಕ್ಕೆ ಹಣ ಬರುವುದಾದರೆ ನಾವು ಖಂಡಿತ ವಿರೋಧ ಮಾಡೋಲ್ಲ. ಸರ್ಕಾರಕ್ಕೆ ಹಣ ಬರಬೇಕು ಎಂಬುದನ್ನು ನಾವು ಸ್ವಾಗತ ಮಾಡುತ್ತೇವೆ. ಆದರೆ ನಾಳೆ ದಿವಸ ಕೋರ್ಟ್‌ಗೆ ಹೋದರೆ ಏನೇನು ಸಮಸ್ಯೆಗಳು ಬರಬಹುದು ಎಂಬುದನ್ನು ತಾವು ದಯವಿಟ್ಟು ಅರ್ಥ ಮಾಡಿಕೊಳ್ಳಿ.

**ಶ್ರೀ ಜೆ.ಸಿ. ಮಾಧುಸ್ವಾಮಿ** :– ಅದು ಒಂದು ವಿಚಾರ. ಇನ್ನೊಂದು ಅಂಶ ತಿಳಿದುಕೊಂಡಿರಿ. Provision of law ಇಲ್ಲವೆಂದಾಗ ಅಥವಾ ಅಲ್ಲೇನಾದರೂ ಲ್ಯಾಕೂನ ಇದೆಯೆಂದಾಗ, the decision of the Court will certain prevail over law making.

**ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ)** :– ಮಾನ್ಯ ಅಧ್ಯಕ್ಷರೆ, ಇದು ಇವರ ಸಮ್ಮುಖದಲ್ಲಿಯೇ ಆದಂಥ ಆದೇಶ. They were parties before

the Court. ಕೋರ್ಟ್‌ನಲ್ಲಿ ಆದೇಶವಾಗಿ ಇದರಲ್ಲಿ ಅವರು ಏನು ಹೇಳಿದ್ದಾರೆಂದರೆ ಇದು ಫೈನಲ್ ಆಗಿ ಡಿಸ್‌ಪೋಸಲ್ ಆದಮೇಲೆ ಆಗ ಇದು ನಮಗೆ ವಿರೋಧವಾದರೆ ನೀವು ವಾಪಸ್ಸು ಕೊಡಬೇಕೆಂದು ಹೇಳಿದ್ದಾರೆ. ಆಗ ಕಲೆಕ್ಟ್ ಮಾಡಿಕೊಳ್ಳುವುದಕ್ಕೆ ಹೇಳಿರುವಂಥಾದ್ದು, ಫೈನಲ್ ಆರ್ಡರ್‌ನಲ್ಲಿ ಅಲ್ಲ. There was an interim Order. ಫೈನಲ್ ಡಿಸ್‌ಪೋಸಲ್‌ನಲ್ಲಿ ನೀವು ಕೊಡಬೇಕೆಂದು ಕೋರ್ಟ್ ಆದೇಶ ಮಾಡಿದರೆ ಈಗ ಕೊಡಬೇಕೆಂದು ಹೇಳಿರುವುದು. ನೀವು ಅದಕ್ಕೆ ಒಪ್ಪಿದ್ದೀರಿ. ಈಗ ನೀವು ಸುಪ್ರೀಂಕೋರ್ಟ್‌ಗೆ ಹೋಗಬೇಕಾಗುತ್ತದೆ. ಅಲ್ಲೇನಾದರೂ ಸ್ಟೇ ಆರ್ಡರ್‌ನ್ನು ತೆಗೆದುಕೊಂಡಿದ್ದೀರ? ಏಕೆಂದರೆ ಇದಕ್ಕಿಂತ ಅದು ಬೆಟರ್ ಎಂದು ಕಾಣೂತ್ತದೆ. ಸರ್ಕಾರ ಈ ಒಂದು ಹಣವನ್ನು ವಾಪಸ್ಸು ಕೊಡುವುದು ತಾತ್ಕಾಲಿಕವಾಗಿ ಇದರಿಂದ ಲಾಭ ಆಗದಿದ್ದರೆ ನಾವು ವಿರೋಧ ಮಾಡುವುದಕ್ಕಂತೂ ಬರುವುದಿಲ್ಲ. But, consequences ಏನೆಂದು ಅರ್ಥವನ್ನು ಸರ್ಕಾರ ಮಾಡಿಕೊಂಡು ಮುಂದಿನ ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ನಾನು ಹೇಳಬಯಸುತ್ತೇನೆ.

**ಶ್ರೀ ಎನ್. ಚಲುವರಾಯಸ್ವಾಮಿ :–** ನಮ್ಮಲ್ಲಿ ಲ್ಯಾಕುನ ಇದ್ದು ಆ ರೀತಿ ಮಾಡಿಲ್ಲ. ಪ್ರೈವೇಟ್ ಸರ್ವೀಸಸ್ ವೆಹಿಕಲ್ ಎನ್ನುವುದನ್ನು ಉಪಯೋಗಿಸಿಕೊಂಡು ಗುತ್ತಿಗೆ ಆಧಾರದ ಮೇಲೆ ಅವರು ವೆಹಿಕಲ್‌ಗಳನ್ನು ರನ್ ಮಡಿದ್ದಾರೆ. ಅದ್ಕಕೋಸ್ಕರವಾಗಿ ನಾವು ಇದನ್ನು ವಸೂಲಿ ಮಾಡಿರತಕ್ಕಂಥಾದ್ದು. ಅವರು ಏನು ಕಾನೂನಿನಲ್ಲಿ ಪ್ರಾವಿಶನ್ ಇತ್ತು, ಆ್ಯಕ್ಟ್‌ನಲ್ಲಿ ಏನು ಪ್ರಾವಿಶನ್ ಇತ್ತೋ Out look ಗೆ ತೋರಿಸಿಕೊಂಡು ಅವರು ಇಂಟರ್ನಲ್ ಆಗಿ ಬೇರೆಯವರ ಜೊತೆ ಅಗ್ರಿಮೆಂಟ್ ಮಾಡಿಕೊಂಡು ಕಾನೂನನ್ನು ಉಲ್ಲಂಘನೆ ಮಾಡಿರುವುದರಿಂದ ಅದರ ಬಗ್ಗೆ ಆಡಿಟ್ ಅಬ್ಜೆಕ್ಷನ್ ತಂದು ನಾವು ಅದನ್ನು ವಸೂಲಿ ಮಾಡಿರುವುದು. ಈ ಬಗ್ಗೆ ಲಾ ಡಿಪಾರ್ಟ್‌ಮೆಂಟ್‌ನಿಂದಲೂ ಕೂಡ ಒಪಿನಿಯನ್ ತೆಗೆದುಕೊಂಡಿದ್ದೇವೆ.

ಇದೇ ರೀತಿಯಲ್ಲಿ ಕಮರ್ಶಿಯಲ್ ಟ್ಯಾಕ್ಸ್‌ನಲ್ಲೂ ಕೂಡ ಎರಡ್ಮೂರು ಇಂಥ ಅಮೆಂಡ್‌ಮೆಂಟ್‌ಗಳನ್ನು ತರಲಾಗಿದೆ. ಒಂದನ್ನು 1998 ರಲ್ಲಿ ತಂದು 1994 ರಿಂದ ರೆಟ್ರಾಸ್ಪೆಕ್ಟಿವ್ ಮಾಡಿದ್ದಾರೆ. ಮತ್ತೊಂದು ಲಕ್ಸುರಿ ಟ್ಯಾಕ್ಸ್‌ದು ಕೆಲವಕ್ಕೆ 2000 ನೇ ಇಸವಿಯಲ್ಲಿ ಂದು 1995 ರಿಂದಲೂ ತಂದಿದ್ದಾರೆ. ಅದು ಯಾವುದರಲ್ಲಿಯೂ ಮತ್ತೆ ಅಪೀಲ್‌ಗಳು ನಿಂತಿಲ್ಲದೇ ಇರುವುದರಿಂದ, ಇದರಲ್ಲಿ ಸುಮಾರು ಹತ್ತರಿಂದ ಹನ್ನೆರಡು ಕೋಟಿ ಸೇವ್ ಆಗುತ್ತದೆ. ಸೇವ್ ಆಗುವ ಹಣಕ್ಕಿಂತ

ಅವರು ಕಾನೂನನ್ನು ಉಲ್ಲಂಘನೆ ಮಾಡಿ ವಾಹನಗಳ ದುರುಪಯೋಗಕ್ಕಾಗಿ ಆಪರೇಟ್ ಮಾಡಿರುವುದರಿಂದ ಇಂಥಾದ್ದನ್ನು ತಪ್ಪಿಸುವ ಸಲುವಾಗಿಯೂ ಕೂಡ ಈ ಬಿಲ್‌ಗೆ ಅನುಮತಿಯನ್ನು ಈ ಸದನ ಕೊಡಬೇಕೆಂದು ಮಾನ್ಯ ಅಧ್ಯಕ್ಷರ ಮುಖೇನ ಕೇಳಿಕೊಳ್ಳುತ್ತೇನೆ.

**ಅಧ್ಯಕ್ಷರು** :– ಪ್ರಸ್ತಾವ ಏನೆಂದರೆ,

"2007 ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.**

**ಖಂಡ 2 ರಿಂದ 4 ರವರೆಗೆ**

**ಅಧ್ಯಕ್ಷರು** :– "ಖಂಡ 2 ರಿಂದ 4 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

**(ಖಂಡ 2 ರಿಂದ 4 ವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಅಧ್ಯಕ್ಷರು** :– ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

ಪ್ರಸ್ತಾವದ ಅಂಗೀಕಾರ

**ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು)** :- ಮಾನ್ಯ ಅಧ್ಯಕ್ಷರೆ, 2007 ನೇ ಸಾಲಿನ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಅಧ್ಯಕ್ಷರು** :- ಪ್ರಸ್ತಾವ ಏನೆಂದರೆ,

"2007 ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

2) ಕರ್ನಾಟಕ ಭೂ ಕಬಳಿಕೆ (ನಿಷೇಧ) ವಿಧೇಯಕ 2007

ಪರ್ಯಾಯಲೋಚನಾ ಪ್ರಸ್ತಾವ

**ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು, ನ್ಯಾಯ, ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)** :- ಮಾನ್ಯ ಅಧ್ಯಕ್ಷರು, 2007 ರ ಕರ್ನಾಟಕ ಭೂ ಕಬಳಿಕೆ (ನಿಷೇಧ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

**ಶ್ರೀ ಎಂ.ಪಿ. ಪ್ರಕಾಶ್** :- ಮಾನ್ಯ ಅಧ್ಯಕ್ಷರೆ, ಮಾನ್ಯ ಭೂ ಕಂದಾಯ ಸಚಿವರು ಏನು ವಿಧೇಯಕವನ್ನು ಮಂಡಿಸಿದರು ಅದರ ಪ್ರತಿರೂಪವೇನೂ ಇದಲ್ಲ. ಆದರೆ ಕೆಲವು ವಿಷಯಗಳ ಬಗ್ಗೆ ಅಲ್ಲಿ ಚರ್ಚೆಯ ಸಂದರ್ಭದಲ್ಲಿ ಈಗ ಕೇವಲ ಕಂದಾಯ ಇಲಾಖೆಗೆ ಸಂಬಂಧಪಟ್ಟಿರತಕ್ಕಂಥ ಭೂಮಿಯ ವಿಚಾರಗಳೇನು ಇವೆ ಅದರ ಆಚೆ ಬೇರೆ ಬೇರೆ ಭೂಮಿಗಳೂ ಕೂಡ ಇರುತ್ತವೆ. ಅದರಲ್ಲಿ ಸರ್ಕಾರದ ಗಮನಕ್ಕೆ ಬಂದಂತೆ ನಕಲಿ ಗೃಹ ನಿರ್ಮಾಣ ಸಂಘಗಳನ್ನು ಕಟ್ಟಿಕೊಂಡು ಅದರ ಮೂಲಕವಾಗಿ ಅನೇಕ ಅಮಾಯಕರಾದಂಥ ಸದಸ್ಯರಿಗೆ ಮೋಸ ಮಾಡಿರತಕ್ಕಂಥಾದ್ದು, ಧಾರ್ಮಿಕ ದತ್ತಿ ಸಂಸ್ಥೆಗಳಿಗೆ ಸೇರಿರತಕ್ಕಂಥ ದೇವಸ್ಥಾನದ ಮತ್ತು ಅದಕ್ಕೆ ಸಂಬಂಧಪಟ್ಟಿರತಕ್ಕಂಥ ಭೂಮಿಯನ್ನು ಕಬಳಿಸಿಕೊಂಡಿರತಕ್ಕಂಥದ್ದು. ಕೊಳಚೆ